# ಹೀಗೊಂದು ಶಾಂತಿ ಕೇಂದ್ರ

**ಮೌಂಟ್ ಅಬು ಪರಿಸರ ನಿಜಕ್ಕೂ ಚೇತೋಹಾರಿ. ಆಧ್ಯಾತ್ಮ ಪ್ರವಚನಗಳ ಜತೆ ಪ್ರವಾಕ್ಕೂ ಇಲ್ಲಿಗೆ ಹೋಗಬಹುದು.**

■ ಚಿತ್ರ–ಲೇಖನ:




ಮೌಂಟ್ ಅಬು ವಸತಿ ಸಮುಚ್ಚಯ

ಬೆಳಿಗ್ಗೆ 3.30ರಿಂದಲೇ ಚಟುವಟಿಕೆಗಳು ಆರಂಭ. ಒಂದಿಷ್ಟು ಜನ ಧ್ಯಾನದಲ್ಲಿ. ಕೆಲವರು ವ್ಯಾಯಾಮದಲ್ಲಿ. ಮತ್ತೊಂದಷ್ಟು ಜನ ವಾಯು ವಿಹಾರದಲ್ಲಿ. ಇನ್ನಷ್ಟು ಜನ ಚಹಾ, ಕಾಫಿ ಸೇವನೆಯಲ್ಲಿ ಮಗ್ನರಾಗಿರುತ್ತಾರೆ.

–ಇದು ನೂರಾರು ಎಕರೆ ವಿಸ್ತೀರ್ಣದಲ್ಲಿ ತಲೆ ಎತ್ತಿ ನಿಂತಿರುವ ಮೌಂಟ್ ಅಬುನಲ್ಲಿ ಇರುವ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದ ಆಧ್ಯಾತ್ಮ ಕೇಂದ್ರದಲ್ಲಿ ಕಾಣಸಿಗುವ ಚಿತ್ರಣ. ರಾಜಸ್ಥಾನದ ಸಿರೋಹಿ ಜಿಲ್ಲೆಯ ಅಬು ರಸ್ತೆಯಿಂದ 12 ಕಿ.ಮೀ. ಅಂತರದಲ್ಲಿರುವ ಪ್ರತ್ಯೇಕ ಆಧ್ಯಾತ್ಮ ಸಾಮ್ರಾಜ್ಯ.

1965ರಲ್ಲಿ ಆರಂಭವಾದ ಈ ಸಂಸ್ಥೆ ಈಗ ಬೃಹದಾಕಾರವಾಗಿ ಬೆಳೆದಿದೆ. ನ್ಯೂಯಾರ್ಕ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ಇದು. ದೇಶದ ಉದ್ದಗಲಕ್ಕೂ ಸಾವಿರಾರು ಕೇಂದ್ರಗಳನ್ನು ಹೊಂದಿ, ಅಪಾರ ಭಕ್ತ ವೃಂದ ಪಡೆದ ಸಂಸ್ಥೆ ಎನ್ನುವ ಹೆಗ್ಗಳಿಕೆಯೂ ಇದರದು. ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಲ್ಲಿ ಮಹಿಳೆಯರ ಪಾಲು ಅಧಿಕ.

ವಜ್ರ ವ್ಯಾಪಾರಿ ಲೇಕ್‌ಚಂದ್ ಅವರಿಂದ ಆರಂಭಗೊಂಡ ಈ ಸಂಸ್ಥೆಯ ಉತ್ತರಾಧಿಕಾರಿಗಳಾಗಿ ಬ್ರಹ್ಮಬಾಬಾ, ಕೃಪಲಾನಿ, ದಾದಿ ಗುಲ್ಜಾರ್ ಹೀಗೆ